
# ರಾಜೀವಗಾಂಧಿ ವಸತಿ ನಿಗಮ ನಿಯಮಿತ

## ನೆರೆಹಾವಳಿ ಸಂತ್ರಸ್ಥರ ವಸತಿ ಕಾರ್ಯಕ್ರಮದಡಿಯಲ್ಲಿ ವಸತಿ ಸೌಕರ್ಯ ಪಡೆಯಲು ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್‌ನ್ನು ಉಪಯೋಗಿಸಲು ಕೈಪಿಡಿ.

2019ರ ಮುಂಗಾರು ಋತುವಿನಲ್ಲಿ ಆಗಸ್ಟ್ 1 ರಿಂದ 9 ರವರೆಗೆ ಕರ್ನಾಟಕ ರಾಜ್ಯದಲ್ಲಿ ಬಿದ್ದಂತಹ ಮಹಾ ಮಳೆಗೆ ಹಾಗು ಮಹಾರಾಷ್ಟ್ರ ರಾಜ್ಯದಲ್ಲಿನ ಕೃಷ್ಣ ಕಣಿವೆ ಜಲಾಶಯಗಳು ತುಂಬಿ ಹರಿದ ನೀರಿನಿಂದ ರಾಜ್ಯದ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಪ್ರವಾಹ ಉಂಟಾಗಿ ನದಿಯ ಅಕ್ಕಪಕ್ಕದ ಪ್ರದೇಶಗಳಿಗೆ ನೀರು ತುಂಬಿ ಅಪಾರ ಪ್ರಮಾಣದ ಜೀವಹಾನಿ ಮತ್ತು ಬೆಳೆಹಾನಿ ಹಾಗು ಸಾರ್ವಜನಿಕ ಆಸ್ತಿ ಹಾನಿಯಾದ ಹಿನ್ನಲೆಯಲ್ಲಿ ಸರ್ಕಾರವು ರಾಜ್ಯದ 22 ಜಿಲ್ಲೆಗಳಡಿ ಬರುವ 103 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶಗಳೆಂದು ಘೋಷಿಸಿದೆ.

ಈ ತಾಲ್ಲೂಕು / ತಾಲ್ಲೂಕಿನಲ್ಲಿ ಬರುವ ನಗರಗಳಲ್ಲಿ ಪ್ರವಾಹದಿಂದ ಸಂತ್ರಸ್ಥರಾದವರಿಗೆ ವಸತಿ ಸೌಕರ್ಯವನ್ನು ತುರ್ತಾಗಿ ಕಲ್ಪಿಸಲು ಕಾರ್ಯಕ್ರಮವನ್ನು ರೂಪಿಸಿದ್ದು, ಇದರಡಿಯಲ್ಲಿ ಜಿಲ್ಲಾಧಿಕಾರಿಗಳು ಗುರ್ತಿಸಿ ಅಂತಿಮಗೊಳಿಸಿದ ನಿರ್ವಸತಿಗರ ವಿವರಗಳನ್ನು ಆನ್‌ಲೈನ್‌ನಲ್ಲಿ ನಮೂದಿಸಲು ರಾಜೀವಗಾಂಧಿ ವಸತಿ ನಿಗಮವು ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಿದ್ದು ಈ ಸಾಫ್ಟ್‌ವೇರ್‌ನ್ನು ಉಪಯೋಗಿಸುವ ಬಗ್ಗೆ ಈ ಕೈಪಿಡಿಯನ್ನು ತಯಾರಿಸಿದ್ದು ಉಪಯೋಗಿಸುವ ವಿಧಾನವನ್ನು ಮುಂದಿನಂತೆ ತಿಳಿಯಪಡಿಸಿದೆ. ನಿಗಮದ ವೆಬ್‌ಸೈಟ್ ವಿಳಾಸ ಇಂತಿದೆ. https://ashraya.karnataka.gov.in.

ಸರ್ಕಾರದ ಆದೇಶದ ಪ್ರಕಾರ ಪ್ರವಾಹ ಪೀಡಿತ ಜಿಲ್ಲೆಗಳಡಿ ಬರುವ ಪ್ರತಿ ತಾಲ್ಲೂಕಿನ ತಹಶೀಲ್ದಾರ್‌ಗಳಿಗೆ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಸೃಜಿಸಲಾಗಿದ್ದು, ಇದರ ಮೂಲಕ ರಾಜೀವ್ ಗಾಂಧಿ ವಸತಿ ನಿಗಮದ ವೆಬ್‌ಸೈಟ್ https://ashraya.karnataka.gov.in. ಮೂಲಕ ಲಾಗಿನ್ ಆಗಿ ಸಂತ್ರಸ್ಥರ ವಿವರಗಳನ್ನು ನಮೂದಿಸುವುದು. ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದ್ದು, ಮಾಹಿತಿಯನ್ನು ಜಿಲ್ಲಾಧಿಕಾರಿಗಳ ಕಛೇರಿಯಿಂದ ಪಡೆದುಕೊಳ್ಳುವುದು. ಬಹುಮುಖ್ಯವಾಗಿ ತಹಶೀಲ್ದಾರ್‌ರವರುಗಳು ಮೊದಲ ಬಾರಿಗೆ ಲಾಗಿನ್ ಆದ ಸಂಧರ್ಭದಲ್ಲಿ ತಪ್ಪದೇ ಪಾಸ್‌ವರ್ಡ್‌ನ್ನು ಬದಲಾಯಿಸಿಕೊಳ್ಳುವುದು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬರುವ ಎಲ್ಲಾ ಸಂತ್ರಸ್ಥರ ವಿವರಗಳನ್ನು ಜಿಲ್ಲಾಧಿಕಾರಿಗಳಿಂದ ನೇಮಿಸಲ್ಪಟ್ಟ ಆಯಾ ತಾಲ್ಲೂಕಿನ ತಹಶೀಲ್ದಾರ್‌ರವರು ಮಾತ್ರ ನಮೂದಿಸುವುದು. ಹೊಸದಾಗಿ ಸೃಜನೆಗೊಂಡ ತಾಲ್ಲೂಕುಗಳು ಪ್ರವಾಹ ಪೀಡಿತ ಪ್ರದೇಶಗಳಿಗೆ ಸೇರಿದ್ದು ತಹಶೀಲ್ದಾರ್‌ಗಳ ನೇಮಕವಾಗಿದ್ದಲ್ಲಿ, ವಿವರಗಳನ್ನು ನಿಗಮಕ್ಕೆ ನೀಡಿದ್ದಲ್ಲಿ ಪ್ರತ್ಯೇಕವಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಸೃಜಿಸಿಕೊಡಲಾಗುವುದು.




| | |
|---|---|
| ಲಾಗಿನ್ ನಂತರ Flood Affected-2019 ಎಂಬ ಮೆನುವನ್ನು ಕ್ಲಿಕ್ಕಿಸುವುದು. ಅದರಡಿ Entry Form ಎಂಬ ಮೆನುವಿನಡಿ Rural ಮತ್ತು Urban ಎಂಬ ಎರಡು ವಿಭಾಗಗಳಿರುತ್ತವೆ. ಗ್ರಾಮೀಣ ಪ್ರದೇಶದ ನೆರೆ ಸಂತ್ರಸ್ಥ ಫಲಾನುಭವಿಯಾದಲ್ಲಿ, "ಗ್ರಾಮೀಣ" ಆಯ್ಕೆ ಮಾಡುವುದು. ನಗರ ಪ್ರದೇಶವಾದಲ್ಲಿ "ನಗರ" ಆಯ್ಕೆ ಮಾಡುವುದು. |   |

# ಗ್ರಾಮೀಣ / ನಗರ ಕ್ಲಿಕ್ಕಿಸಿದಾಗ ಈ ಕೆಳಕಂಡಂತೆ ಅಪ್ಲಿಕೇಷನ್ ಸ್ಕ್ರೀನ್ ಕಾಣುವುದು.

ashraya.karnataka.gov.in/Testing/CEO/frmFlood_Rural_New.aspx

Apps

Home

ಕರ್ನಾಟಕ ಸರ್ಕಾರ | Government of Karnataka

**Rajiv Gandhi Housing Corporation Limited**

(A Government of Karnataka Enterprise)

ಜಿಲ್ಲೆ ಬೆಳಗಾವಿ

Log Out

Change Password DSC Registration Flood Affected-2019 Beneficiary Approval Reports Lokayuktha Loan waive - off IMEI No. Register ULB Mobile

## ನೆರೆ ಸಂತ್ರಸ್ಥರ ಪುನರ್ವಸತಿ ಕಾರ್ಯಕ್ರಮ - 2019

(PLEASE ENTER THE NAME(KANNADA) & SPOUSE NAME(KANNADA) IN UNICODE ONLY)

| | | | | | |
|---|---|---|---|---|---|
| 1 | ತಾಲ್ಲೂಕು (Taluk): | ಹೊನ್ನಾವರ * | 2 | ಗ್ರಾಮ ಪಂಚಾಯಿತಿ (Grama Panchayath) : | ಉಪ್ಪೋಣಿ * |
| 3 | ಹಳ್ಳಿ (Village): | ಮಹಿಮೆ * | | | |
| 4 | ಅರ್ಜಿದಾರರ ಪೂರ್ಣ ಹೆಸರು ಕನ್ನಡದಲ್ಲಿ (Name of the Applicant in Kannada): | ಕೃಷ್ಣಮೂರ್ತಿ ಕೆ ಹೆಚ್ * | 5 | ತಂದೆ/ತಾಯಿ/ಗಂಡ ಹೆಸರು ಕನ್ನಡದಲ್ಲಿ (Father/Mother/Husband's Name in Kannada): | ಹುಚ್ಚಪ್ಪ * |
| 6 | ಅರ್ಜಿದಾರರ ಪೂರ್ಣ ಹೆಸರು ಆಂಗ್ಲದಲ್ಲಿ (Name of the Applicant in English): | K H KRISHNAMURTHY * | 7 | ತಂದೆ/ತಾಯಿ/ಗಂಡ ಹೆಸರು ಆಂಗ್ಲದಲ್ಲಿ (Father/Mother/Husband's Name in English) : | M V HUUCHAPPA * |
| 8 | ಲಿಂಗ (Gender): | ಪುರುಷ * | 9 | ಅಂಗವಿಕಲರೇ ?(physically handicaped): | ಇಲ್ಲ * |
| 10 | ವಯಸ್ಸು ವರ್ಷಗಳಲ್ಲಿ ಅಂದಾಜು (Age) : | 23 * | 11 | ವರ್ಗ (Category) : | ಸಾಮಾನ್ಯ * |

☑ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಆಧಾರ್ ಸಂಖ್ಯೆ, ಹೆಸರು, ಬೆರಳಚ್ಚು ಗುರುತು / ಕಣ್ಣಿನ ಗುರುತನ್ನು UIDAI ರಲ್ಲಿ ಪ್ರಮಾಣಿಕರಿಸಿ ಕೊಳ್ಳುವ ಮೂಲಕ ಮಾಹಿತಿ ಪಡೆದು ಕೊಳ್ಳಲು ದೃಡೀಕರಣ ನೀಡಿರುತ್ತೇನೆ. ನನ್ನ ಗುರುತಿನ ಮಾಹಿತಿಯನ್ನು ವಸತಿ ಯೋಜನೆಗಾಗಿ ಮಾತ್ರ ಉಪಯೋಗಿಸುವುದಾಗಿ ಮತ್ತು ನನ್ನ ಬೆರಳಚ್ಚು ಗುರುತನ್ನು ಎಲ್ಲೂ ಸಂಗ್ರಹಣೆ ಮಾಡದೇ ಹಾಗೂ ಎಲ್ಲಿಯೂ ಹಂಚಿಕೊಳ್ಳದೆ CIDRನ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸುವುದಾಗಿ ರಾಜೀವ್ ಗಾಂಧಿ ವಸತಿ ನಿಗಮ ತಿಳಿಸಿದೆ.

| | | | | | |
|---|---|---|---|---|---|
| 12 | ಆಧಾರ್ ಸಂಖ್ಯೆ (Aadhaar Number): | * | 13 | ಮೊಬೈಲ್ ಸಂಖ್ಯೆ (Mobile number) : | 9448287511 * |
| 14 | ವಾರ್ಷಿಕ ಆದಾಯ | 444 * | | | |

### -: 15. ಪಡಿತರ ಚೀಟಿ ವಿವರಗಳು / RationCard Details :-

ಜಿಲ್ಲೆ (District): --Select District-- ತಾಲ್ಲೂಕು(Taluk) : ಪಡಿತರ ಚೀಟಿ ಸಂಖ್ಯೆ (RationCard No.) : MYSI00239917 VIEW

**District** : Belgaum **Taluk** : Chikodi

| Member ID | Name | Gender | Relation Ship | Match Score |
|---|---|---|---|---|
| 1 | Krishna | Male | Self | 50.51 |
| 2 | Shivaprashanth | Male | Brother | 35.02 |
| 3 | Kavya | Female | Sister | 58.33 |

Proceed

### -: 16. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಂಖ್ಯೆ (Caste & Income Certificate) :-

**Category** Category 1 **Caste RD No.** : VIEW **Income RD No.** : VIEW

ಮುಂದುವರಿಸಿ / PROCEED

### -: 17. ಇತರ ವಿವರಗಳು:-

ಹಾನಿಗೊಳಗಾದ ಮನೆಯ ಸ್ಥಿತಿ: ಸಂಪೂರ್ಣ ಹಾನಿಗೊಳಗಾದ ಮನೆ (ಶೇ * NDRF/SDRF ಮಾರ್ಗಸೂಚಿ ಪ್ರಕಾರ ಸಂಪೂರ್ಣ/ಭಾಗಷ: ಹಾನಿಗೊಳಗಾದ ಮನೆಯು ? ಅಧಿಕೃತ *

NDRF/SDRF ಯಿಂದ ಸಂಪೂರ್ಣ ಹಾನಿಗೊಳಗಾದ ಮನೆಯ ಪುನರ್ ನಿರ್ಮಾಣಕ್ಕೆ ಪರಿಹಾರ ಧನ ವಿತರಿಸಲಾಗಿದಿಯೇ?: Yes * ಮೊತ್ತ * ದಿನಾಂಕ (Date) : DD/MM/YYYY *

ವಿಧ : ಮಾಸಿಕ ಬಾಡಿಗೆ *

ಮನೆ ಇರುವ ಸ್ಥಳದಲ್ಲಿ ಪುನರ್ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದೇ? : Yes *

ನಿವೇಶನ ಅಳತೆ (ಚದರಡಿಗಳಲ್ಲಿ) ಉದ್ದ (ಅಡಿ) * ಅಗಲ (ಅಡಿ) ಖಾತಾ ಸಂಖ್ಯೆ (Khatha Number) : *


### -: 18. ಬ್ಯಾಂಕ್ ವಿವರಗಳು:-

| | | | | | |
|---|---|---|---|---|---|
| 1 | ಬ್ಯಾಂಕ್ ಹೆಸರು (Bank Name): | --ಆಯ್ಕೆಮಾಡಿ-- * | 2 | ಬ್ಯಾಂಕ್ ಶಾಖೆ ಹೆಸರು (Branch Name): | * |
| 3 | ಬ್ಯಾಂಕ್ ಖಾತೆ ಸಂಖ್ಯೆ (Account Number): | * | 4 | ಬ್ಯಾಂಕ್ ಐ.ಎಫ್ ಎಸ್ ಸಿ (IFSC Code) : | * |
| 5 | ಬ್ಯಾಂಕ್ ಪಾಸ್ ಪುಸ್ತಕ (Bank Passbook Attachement): | Choose File No file chosen * | 6 | ಆಧಾರ್ ಜೋಡಣೆ (Aadhaar Attachement) : | Choose File No file chosen * |


SAVE CANCEL


ಈ ಅಪ್ಲಿಕೇಷನ್ ನಲ್ಲಿ ಪ್ರತಿಯೊಂದು ಮಾಹಿತಿಯನ್ನು ನಮೂದಿಸುವ ಬಗೆಯನ್ನು ಈ ಕೆಳಗೆ ವಿವರಿಸಿದೆ.


**ಕ್ರ.ಸಂ. 1 ರಿಂದ 3** ನೆರೆಹಾವಳಿ ಸಂತ್ರಸ್ಥರು ಗ್ರಾಮೀಣ ಪ್ರದೇಶಕ್ಕೆ ಸೇರಿದ್ದಲ್ಲಿ ಸಂಬಂಧಪಟ್ಟ ತಾಲ್ಲೂಕು, ಗ್ರಾಮಪಂಚಾಯಿತಿ, ಹಳ್ಳಿಯನ್ನು ಆಯ್ಕೆಗೊಳಿಸುವುದು.









**ಕ್ರ.ಸಂ. 1 ರಿಂದ 2** ನೆರೆಹಾವಳಿ ಸಂತ್ರಸ್ಥರು ನಗರ ಪ್ರದೇಶಕ್ಕೆ ಸೇರಿದ್ದಲ್ಲಿ ಪಟ್ಟಣ, ವಾರ್ಡ್‌ನ್ನು ಆಯ್ಕೆಗೊಳಿಸುವುದು.





| | | |
|---|---|---|
| ಕ್ರಸಂ 4 ರಿಂದ 14 | ನೆರೆ ಸಂತ್ರಸ್ಥ ಫಲಾನುಭವಿಯ ಹೆಸರು ಮತ್ತು ವೈಯಕ್ತಿಕ ವಿವರಗಳು (ತಂದೆ/ ಗಂಡನ ಹೆಸರನ್ನು ಜಾಗರೂಕತೆಯಿಂದ ಆಧಾರ್‌ನಲ್ಲಿರುವಂತೆ ನಮೂದಿಸುವುದು) |   |
| ತಪ್ಪಿಲ್ಲದೇ ಕನ್ನಡ ಮತ್ತು ಆಂಗ್ಲದಲ್ಲಿ ನಮೂದಿಸುವುದು. ಕನ್ನಡದಲ್ಲಿ ನಮೂದಿಸುವಾಗ Font ನುಡಿ ಯೂನಿಕೋಡ್ ನಲ್ಲಿ ನಮೂದಿಸಿರುವುದನ್ನು ಖಚಿತಪಡಿಸಿಕೊಳ್ಳುವುದು. ಉಳಿದಂತೆ ಲಿಂಗ, ಅಂಗವಿಕಲ, ವರ್ಗದಲ್ಲಿ ಸಂಬಂಧಿಸಿದ್ದನ್ನು ಆಯ್ಕೆಗೊಳಿಸುವುದು. ಆಧಾರ್‌ನಲ್ಲಿರುವಂತೆ ನಿಖರವಾದ ವಯಸ್ಸನ್ನು ಮತ್ತು ಚಾಲ್ತಿಯಲ್ಲಿರುವ ಹಾಗೂ ಫಲಾನುಭವಿಗೆ ಸಂಬಂಧಿಸಿದ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು. **ಆಧಾರ್ ಸಂಖ್ಯೆಯನ್ನು ಬಹಳ ಜಾಗರೂತೆಯಿಂದ ಎರಡೆರಡು ಬಾರಿ ಪರಿಶೀಲಿಸಿಕೊಂಡು ನಮೂದಿಸುವುದು ಹಾಗೂ** ಸಂತ್ರಸ್ಥರ ವಾರ್ಷಿಕ ಆದಾಯವನ್ನು ರೂಗಳಲ್ಲಿ ನಮೂದಿಸುವುದು. | | |

| | | |
|---|---|---|
| ಕ್ರಸಂ 15 | **ಪಡಿತರ ಚೀಟಿಯ ವಿವರಗಳು :** ನೆರೆ ಸಂತ್ರಸ್ಥ ಫಲಾನುಭವಿಯ ಕುಟುಂಬದ **ಪಡಿತರ ಚೀಟಿಯ ವಿವರಗಳನ್ನು ನಮೂದಿಸುವುದು ಕಡ್ಡಾಯವಾಗಿದೆ.** |   |
| ಪಡಿತರ ಚೀಟಿಯಲ್ಲಿರುವ ಹೆಸರು ಮತ್ತು ಆಯ್ಕೆಯಾಗಿರುವ ಹೆಸರು (ಕನ್ನಡ ಮತ್ತು ಆಂಗ್ಲದಲ್ಲಿ ನಮೂದಿಸಲಾಗುವ ಹೆಸರು) ಆದಷ್ಟು ಒಂದೇ ರೀತಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br><br>ಪಡಿತರ ಚೀಟಿಯಲ್ಲಿರುವ ಕುಟುಂಬದ ಮುಖ್ಯಸ್ಥ ಅಥವಾ ಕುಟುಂಬದ ಸದಸ್ಯರ ಹೆಸರಿಗೆ, ಕನ್ನಡ ಮತ್ತು ಆಂಗ್ಲದಲ್ಲಿ ನಮೂದಿಸಲಾಗುವ ಹೆಸರು ಹೋಲಿಕೆಯಾಗದಿದ್ದಲ್ಲಿ ಪರಿಗಣಿಸಲಾಗುವುದಿಲ್ಲ. | | |

| | | |
|---|---|---|
| ಕ್ರಸಂ 16 | **ಜಾತಿ & ಆದಾಯ ಪ್ರಮಾಣ ಪತ್ರದ ಸಂಖ್ಯೆ:** |  |
| ನೆರೆ ಸಂತ್ರಸ್ಥ ಫಲಾನುಭವಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ **ಆರ್‌ಡಿ. ಸಂಖ್ಯೆ ಇದ್ದಲ್ಲಿ ನಮೂದಿಸುವುದು.** ಜಾತಿ ಮತ್ತು ಆಧಾಯ ಪ್ರಮಾಣದಲ್ಲಿರುವ ಹೆಸರು ಮತ್ತು ಆಯ್ಕೆಯಾಗಿರುವ ಹೆಸರು (ಕನ್ನಡ ಮತ್ತು ಆಂಗ್ಲದಲ್ಲಿ ನಮೂದಿಸಲಾಗುವ ಹೆಸರು) ಆದಷ್ಟು ಒಂದೇ ರೀತಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. | | |

| | | |
|---|---|---|
| ಕ್ರಸಂ 17 | **ಇತರೆ ವಿವರಗಳು :** ನೆರೆಹಾವಳಿಯಲ್ಲಿ ಮನೆ ಕಳೆದುಕೊಂಡವರಿಗೆ 3 ರೀತಿಯ ಪರಿಹಾರವನ್ನು ನೀಡಲಾಗುತ್ತಿದೆ. ಅದರಂತೆ ಫಲಾನುಭವಿಯು ಅರ್ಹವಾಗಿರುವ ಪರಿಹಾರವನ್ನು ಆಯ್ಕೆಗೊಳಿಸುವುದು. ನಂತರ ಹಾನಿಗೊಳಗಾದ ಮನೆಯು ಅಧಿಕೃತ ಅಥವಾ ಅನಧಿಕೃತವಾಗಿರುವ ಬಗ್ಗೆ ದೃಢೀಕರಿಸುವುದು. |  |
| | ಒಂದು ವೇಳೆ ದೃಢೀಕೃತಗೊಳಿಸಿದ್ದಲ್ಲಿ ಎನ್.ಡಿ.ಆರ್.ಎಫ್/ಎಸ್‌ಡಿಆರ್‌ಎಫ್ ನಡಿ ಪರಿಹಾರ ವಿತರಿಸಲಾಗಿರುವ ಬಗ್ಗೆ ಹೌದು/ಇಲ್ಲ ಎಂಬ ಮಾಹಿತಿ ನೀಡುವುದು. ಒಂದುವೇಳೆ ಹೌದದಲ್ಲಿ ನೀಡಿರುವ ಮೊತ್ತ ಮತ್ತು ದಿನಾಂಕ ನಮೂದಿಸುವುದು.<br><br>ಕ್ರ.ಸಂ. 17ರಲ್ಲಿ ಸಂಪೂರ್ಣ ಹಾನಿಗೊಳಗಾದ ಮನೆಯನ್ನು ಆಯ್ಕೆಗೊಳಿಸಿದ್ದಲ್ಲಿ, ನೆರೆ ಸಂತ್ರಸ್ಥರ ಫಲಾನುಭವಿಯು ಮನೆ ನಿರ್ಮಿಸಿಕೊಳ್ಳುವವರೆಗೆ ಪ್ರತಿ ತಿಂಗಳು ರೂ. 5000 ಮಾಸಿಕ ಬಾಡಿಗೆಯನ್ನು (10 ತಿಂಗಳವರೆಗೆ) ಫಲಾನುಭವಿಯ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡುವ ಸಲುವಾಗಿ ಅಥವಾ ತಾತ್ಕಾಲಿಕ ಶೆಡ್ ಆಯ್ಕೆ ಮಾಡಿದಲ್ಲಿ ಒಂದೇ ಕಂತಿನಲ್ಲಿ ರೂ. 50000 ಗಳನ್ನು ಫಲಾನುಭವಿಗಳ ಖಾತೆಗೆ ವರ್ಗಾಯಿಸುವ ಸಲುವಾಗಿ, ಸಂತ್ರಸ್ಥರು ಮನವಿಯ ಮೇರೆಗೆ ಒಂದನ್ನು ಆಯ್ಕೆಗೊಳಿಸುವುದು. | |
| | ಕ್ರ. ಸಂ. 17ರಲ್ಲಿ ಆಯ್ಕೆಗೊಳಿಸಿದ ಹಾನಿಗೊಳಗಾದ ಮನೆಯು ಒಂದುವೇಳೆ ಎನ್.ಡಿ.ಆರ್.ಎಫ್/ಎಸ್‌ಡಿಆರ್‌ಎಫ್ ನಡಿ ಪರಿಹಾರ ವಿತರಿಸಲು ಅನಧಿಕೃತ ಎಂದು ಆಯ್ಕೆಗೊಳಿಸಿದ್ದಲ್ಲಿ ಅದಕ್ಕೆ ಕಾರಣಗಳನ್ನು ಆಯ್ಕೆಗೊಳಿಸುವುದು |  |
| | ಮನೆ ಇರುವ ಸ್ಥಳದಲ್ಲಿ ಪುನರ್ ನಿರ್ಮಾಣಕ್ಕೆ ಅನುಮತಿ ನೀಡಿದ್ದಲ್ಲಿ ಹೌದು/ಇಲ್ಲ ಆಯ್ಕೆಗೊಳಿಸುವುದು. |  |
| | ಹೌದು ಎಂದಾದಲ್ಲಿ ಮಾತ್ರ **ನಿವೇಶನದ ಅಳತೆ ಹಾಗೂ ಖಾತಾ ವಿವರಗಳನ್ನು ನೀಡುವುದು.** ನಿವೇಶನದ ಅಳತೆಯನ್ನು ಅಡಿಗಳಲ್ಲಿ ಹಾಗೂ ಖಾತಾ ಸಂಖ್ಯೆಯನ್ನು ಇ-ಖಾತಾದಲ್ಲಿನ ನಮೂನೆ-9 ರಲ್ಲಿ ನಮೂದಾಗಿರುವಂತೆ ಖಾತಾ ಸಂಖ್ಯೆಯನ್ನು ನಮೂದಿಸುವುದು. | |
| | ಪುನರ್ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದೇ ಎಂಬುದಕ್ಕೆ "ಇಲ್ಲ" ಎಂದಾದಲ್ಲಿ ಪರ್ಯಾಯ ಸ್ಥಳವನ್ನು ಗುರ್ತಿಸಿರುವ ಬಗ್ಗೆ ಹೌದು/ಇಲ್ಲ ಎಂಬ ಬಗ್ಗೆ ಮಾಹಿತಿ ನೀಡುವುದು. ಹೌದು ಎಂದಾದರೆ **ಮಾತ್ರ** ಪರ್ಯಾಯ ಸ್ಥಳದಲ್ಲಿ |  |
| | ಗ್ರಾಮೀಣ ಪ್ರದೇಶವಾದರೆ ಜಿಲ್ಲೆ, ತಾಲ್ಲೂಕು, ಗ್ರಾಪಂ, ಹಳ್ಳಿ ಸರ್ವೇ ನಂ ನ ವಿಳಾಸವನ್ನು, ನಗರ ಪ್ರದೇಶವಾದರೆ ಜಿಲ್ಲೆ, ಪಟ್ಟಣ, ವಾರ್ಡ್, ಸರ್ವೇ ನಂನ ವಿಳಾಸವನ್ನು ನಮೂದಿಸುವುದು. | |

<table>
<tr>
<td>ಕ್ರಸಂ<br>18</td>
<td>ಬ್ಯಾಂಕ್ ಮಾಹಿತಿ :<br><br>ನೆರೆ ಸಂತ್ರಸ್ಥ ಫಲಾನುಭವಿಯು ಸಹಾಯಧನವನ್ನು ಪಡೆದುಕೊಳ್ಳಲು ಈ ಅಂಕಣಗಳು ಬಹಳ ಮುಖ್ಯವಾಗಿದೆ.</td>
<td>
-: ಬ್ಯಾಂಕ್ ವಿವರಗಳು:-
<table>
<tr><td>1</td><td>ಬ್ಯಾಂಕ್ ಹೆಸರು (Bank Name):</td><td>State Bank of India *</td><td>2</td><td>ಬ್ಯಾಂಕ್ ಶಾಖೆ ಹೆಸರು (Branch Name):</td><td>Ankola *</td></tr>
<tr><td>3</td><td>ಬ್ಯಾಂಕ್ ಖಾತೆ ಸಂಖ್ಯೆ (Account Number):</td><td>563269596652 *</td><td>4</td><td>ಬ್ಯಾಂಕ್ ಐ.ಎಫ್ ಎಸ್ ಸಿ (IFSC Code) :</td><td>SBIN0012532 *</td></tr>
<tr><td>5</td><td>ಬ್ಯಾಂಕ್ ಪಾಸ್ ಪುಸ್ತಕ (Bank Passbook Attachement):</td><td>Choose file DQZPS1422N-2019.pdf *</td><td>6</td><td>ಆಧಾರ್ ಜೋಡಣೆ (Aadhaar Attachement) :</td><td>Choose file 1563517005...hmTZw8.pdf *</td></tr>
</table>
SAVE CANCEL</td>
</tr>
<tr>
<td colspan="3"><u>ಬ್ಯಾಂಕ್ ಮಾಹಿತಿ :</u>ಚಾಲ್ತಿಯಲ್ಲಿರುವ ಬ್ಯಾಂಕಿನ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ಬ್ಯಾಂಕ್ ಶಾಖೆ ಹೆಸರು ಐ.ಎಫ್.ಎಸ್.ಸಿ. ಕೋಡ್‌ನ್ನು ತಪ್ಪದೇ ನೀಡುವುದು. ಅಲ್ಲದೇ ಬ್ಯಾಂಕ್ ಪಾಸ್ ಪುಸ್ತಕದ ಪಿಡಿಎಫ್ ಫೈಲ್ (.PDF file) ನ್ನು ಅಪ್‌ಲೋಡ್ ಮಾಡುವುದು.<br><u>ಆಧಾರ್ ಮಾಹಿತಿ :</u> ಅಪ್‌ಲೋಡ್ ಮಾಡುವ ಮುನ್ನ ಆಧಾರ್ ಕಾರ್ಡ್ ಫಲಾನುಭವಿಗೆ ಸಂಬಂಧಿಸಿದ ಬಗ್ಗೆ ಖಚಿತಪಡಿಸಿಕೊಳ್ಳುವುದು. ಆ ನಂತರ ಆಧಾರ್ ಕಾರ್ಡ್ ಪಿಡಿಎಫ್ ಫೈಲ್ (.PDF file) ನ್ನು ಅಪ್‌ಲೋಡ್ ಮಾಡುವುದು.</td>
</tr>
</table>

**ಎಲ್ಲಾ ವಿವರಗಳನ್ನು ಖಚಿತಪಡಿಸಿಕೊಂಡ ನಂತರ 'Save' ಬಟನ್‌ನ್ನು ಒತ್ತುವುದು. ಆ ನಂತರ ಯಾವುದೇ ಕಾರಣಕ್ಕೂ ವಿವರಗಳನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ :**


ಸ್ಪಂದನಾ ಸಹಾಯವಾಣಿ
ರಾಜೀವಗಾಂಧಿ ವಸತಿ ನಿಗಮ

080–23118888 ಅಥವಾ

**ಡಿ. ರವಿಕುಮಾರ್**

ಸಹಾಯಕ ಪ್ರಧಾನ ವ್ಯವಸ್ಥಾಪಕರು
(ಕಾಯಕ್ರಮ ಅನುಷ್ಠಾನ)
ರಾಜೀವಗಾಂಧಿ ವಸತಿ ನಿಗಮ

Mob : 9448287511,
080–23118888 Extn 32

**ಶ್ರೀಮತಿ ಆಶಾ**

ಸಹಾಯಕ ಪ್ರಧಾನ ವ್ಯವಸ್ಥಾಪಕರು
(ಕಾಯಕ್ರಮ ಅನುಷ್ಠಾನ)
ರಾಜೀವಗಾಂಧಿ ವಸತಿ ನಿಗಮ

Mob : 9448287510
080–23118888 ಇಥಣಟ 34